ಮೈಸೂರು–ಕೆ.ಆರ್.ನಗರ–ಕುಶಾಲನಗರ ರೈಲ್ವೆ ಯೋಜನೆ

647 (880) ಶ್ರೀ ವೆಂಕಟೇಶ್ ಕೆ. (ಪಿರಿಯಾಪಟ್ಟಣ):– ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ರೈಲ್ವೆ ಮಾರ್ಗಗಳಿದ್ದು ಕೊಡಗು ಜಿಲ್ಲೆಗೆ ರೈಲ್ವೆ ಮಾರ್ಗ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ರಾಜ್ಯ ಸರ್ಕಾರ ಮೈಸೂರಿನಿಂದ ಕೊಡಗು ಜಿಲ್ಲೆ ಕುಶಾಲನಗರ ತನಕ ರೈಲ್ವೆ ಮಾರ್ಗವನ್ನು ನಿರ್ಮಿಸಲು ಕೇಂದ್ರ ರೈಲ್ವೆ ಇಲಾಖೆಯೊಂದಿಗೆ ಇದುವರೆವಿಗೂ ಪತ್ರ ವ್ಯವಹಾರವನ್ನು ಮಾಡಿದೆಯೆ ;

ಇ) ಮಾಡಿದ್ದಲ್ಲಿ, ಯಾವ ಯಾವ ರೀತಿ ಕ್ರಮವನ್ನು ವಹಿಸಲಾಗಿದೆ (ಪೂರ್ಣ ಮಾಹಿತಿ ನೀಡುವುದು) ;

ಈ) ಕೇಂದ್ರ ರೈಲ್ವೆ ರಾಜ್ಯ ಸಚಿವರು ಇತ್ತೀಚೆಗೆ ರಾಜ್ಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮೈಸೂರು–ಕೆ.ಆರ್.ನಗರ–ಕುಶಾಲನಗರ ರೈಲ್ವೆ ಯೋಜನೆಯನ್ನು ಕೈಗೊಳ್ಳುವ ಸಲುವಾಗಿ ಅತಿ ಶೀಘ್ರವಾಗಿ ಸಮೀಕ್ಷೆ ಕಾರ್ಯವನ್ನು ಆರಂಭಿಸಲಾಗುವುದು ಎಂದು ಪತ್ರಿಕೆ ಹೇಳಿಕೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಹಾಗಿದ್ದಲ್ಲಿ, ಕೇಂದ್ರ–ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಈ ರೈಲ್ವೆ ಯೋಜನೆಗೆ ಕೆಂಗೇರಿ–ಚಾಮರಾಜನಗರ ರೈಲ್ವೆ ಯೋಜನೆಗೆ ಬೇಕಾದ ಜಮೀನನ್ನು ಉಚಿತವಾಗಿ ನೀಡಿದಂತೆ ಮೈಸೂರು–ಕುಶಾಲನಗರ ರೈಲ್ವೆ ಯೋಜನೆಗೂ ಸರ್ಕಾರ ಉಚಿತವಾಗಿ ಜಮೀನನ್ನು ನೀಡಲಿದೆಯೇ ;

ಊ) ರಾಜ್ಯ ಸರ್ಕಾರದಿಂದ ಶೇಕಡಾ 50 ರಷ್ಟು ಹಣವನ್ನು ಈ ಯೋಜನೆಗೆ ಒದಗಿಸಿಕೊಡುವುದೇ ;

ಶ್ರೀ ಡಿ. ವಿ. ಸದಾನಂದಗೌಡ (ಮಾನ್ಯ ಮುಖ್ಯಮಂತ್ರಿಗಳು):–

ಅ) ಹೌದು

ಆ) ಹೌದು, ಈ ಮಾರ್ಗದ ಸರ್ವೇ ಕಾರ್ಯವನ್ನು ಕೈಗೆತ್ತಿಕೊಳ್ಳಲು 2010–11 ಸಾಲಿನ ರೈಲ್ವೆ ಆಯವ್ಯಯದಲ್ಲಿ ಮಂಜೂರಾತಿಯನ್ನು ನೀಡಿದೆ. ಈ ಮಾರ್ಗವು ಸಂರಕ್ಷಿತ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವುದರಿಂದ, ಪರಿಸರದ ಮೇಲಾಗುವ ಸಾಧಕ ಬಾಧಕಗಳ ಅಧ್ಯಯನ ಮಾಡಲು ಅನುಮತಿ ನೀಡುವಂತೆ ನೈರುತ್ಯ ವಲಯದ ಮುಖ್ಯ ಆಡಳಿತಾಧಿಕಾರಿಯವರು ಸರ್ಕಾರವನ್ನು ಕೋರಿದ್ದು ಈ ವಿಷಯವು ಪರಿಶೀಲನೆಯಲ್ಲಿದೆ.

ಈ) ಹೌದು.

ಉ) 2007ನೇ ಸಾಲಿನಲ್ಲಿ ರೈಲ್ವೆ ಮಂತ್ರಾಲಯದಿಂದ ಬೆಂಗಳೂರು–ಕೆಂಗೇರಿ–ಕನಕಪುರ–ಚಾಮರಾಜನಗರವರೆಗಿನ ಮಾರ್ಗವು ಮಂಜೂರಾಗಿರುವುದರಿಂದ ಈ ಮಾರ್ಗಕ್ಕೆ ಉಚಿತವಾಗಿ ಭೂಮಿಯನ್ನು ನೀಡಲಾಗುವುದಿಲ್ಲ. 2010–11ನೇ ಸಾಲಿನಿಂದ ರಾಜ್ಯಕ್ಕೆ ಮಂಜೂರಾಗುವ ಹೊಸ ರೈಲ್ವೆ ಯೋಜನೆಗಳಿಗೆ ಉಚಿತವಾಗಿ ಜಮೀನನ್ನು ನೀಡಿ ರೈಲು ಮಾರ್ಗದ ನಿರ್ಮಾಣಕ್ಕೆ ತಗಲುವ ವೆಚ್ಚದಲ್ಲಿ ಶೇಕಡ 50ರಷ್ಟು ವೆಚ್ಚವನ್ನು ರಾಜ್ಯ ಸರ್ಕಾರದಿಂದ ಭರಿಸಲಾಗುತ್ತಿದೆ. ಮೈಸೂರು–ಕೆ.ಆರ್.ನಗರ–ಕುಶಾಲನಗರ ಹೊಸ ರೈಲು ಮಾರ್ಗದ ಯೋಜನೆಗೆ ರೈಲ್ವೆ ಮಂತ್ರಾಲಯವು ಮಂಜೂರಾತಿಯನ್ನು ನೀಡಿದಲ್ಲಿ ಈ ಮಾರ್ಗಕ್ಕೆ ಉಚಿತವಾಗಿ ಜಮೀನು ನೀಡುವ ವಿಷಯವನ್ನು ಪರಿಶೀಲಿಸಲಾಗುವುದು.

ಊ) ರೈಲ್ವೆ ಮಂತ್ರಾಲಯವು ಈ ಯೋಜನೆಗೆ ಮಂಜೂರಾತಿಯನ್ನು ನೀಡಿದಲ್ಲಿ ಶೇಕಡ 50 ರಷ್ಟು ವೆಚ್ಚವನ್ನು ಭರಿಸಲು ಪರಿಶೀಲಿಸಲಾಗುವುದು.

ಪತ್ರಿಕಾ ಭವನ ಪ್ರಾರಂಭಿಸುವುದು

648 (424) ಶ್ರೀ ವಿಶ್ವನಾಥ್ ಎಸ್.ಆರ್. (ಯಲಹಂಕ):– ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಯಲಹಂಕ ವಿಧಾನಸಭಾ ಕ್ಷೇತ್ರದ ಕೇಂದ್ರ ಸ್ಥಾನದಿಂದ ಯಲಹಂಕದಲ್ಲಿ ಪತ್ರಿಕಾ ಭವನ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

ಆ) ಹಾಗಿದ್ದಲ್ಲಿ, ಇದನ್ನು ಯಾವಾಗ ಪ್ರಾರಂಭಿಸಲಾಗುವುದು ?

ಇ) ಇದನ್ನು ಪ್ರಾರಂಭಿಸುವುದರಿಂದ ಪತ್ರಿಕೋದ್ಯಮಕ್ಕೆ ಪ್ರೋತ್ಸಾಹ ನೀಡದಂತಾಗುವುದಿಲ್ಲವೆ ?